# ಕುಣಿಯಲಾರದವರು ಬೆಂಗಳೂರನ್ನು ದೂರಿದರು!

ತೆಲುಗು ಚಿತ್ರರಂಗವಿನ್ನೂ ಮದರಾಸಿನಲ್ಲಿ ನೆಲೆ ನಿಂತಿದ್ದ ಸಂದರ್ಭ. ಒಂದುದಿನ, ತೆಲುಗಿನ ಪ್ರಸಿದ್ಧ ನಾಯಕ ಅಕ್ಕಿನೇನಿ ನಾಗೇಶ್ವರರಾವ್ ನಿರ್ಮಾಪಕರ ಸಭೆ ಕರೆದರು. ನನ್ನ ವಿಳಾಸವನ್ನು ಹೈದರಾಬಾದ್‌ಗೆ ಬದಲಿಸುತ್ತಿದ್ದೇನೆ. ಇನ್ನುಮುಂದೆ ನನ್ನ ಕಾಲ್‌ಷೀಟ್ ಬೇಕಿದ್ದರೆ ನೀವು ಅಲ್ಲಿಗೇ ಬರಬೇಕು. ಅಷ್ಟಕ್ಕೆ ಅಕ್ಕಿನೇನಿ ಸುಮ್ಮನಾಗಲಿಲ್ಲ. ಹೈದರಾಬಾದ್‌ಗೆ ಬರುವ ವೇಳೆಗಾಗಲೇ, ಸ್ಟುಡಿಯೋ ನಿರ್ಮಾಣಕ್ಕೆಂದು ಜಾಗ ಪಡೆದುಕೊಂಡಿದ್ದರು. ಸರ್ಕಾರ ಕೊಟ್ಟಿದ್ದುದು ಒಂದು ಬರಡು ಗುಡ್ಡ. ಆ ಗುಡ್ಡವನ್ನೇ ಸವರಿದ ಅಕ್ಕಿನೇನಿ ಅನ್ನಪೂರ್ಣ ಸ್ಟುಡಿಯೋ ಆಗಿ ಬದಲಿಸಿದರು. ತೆಲುಗು ಚಿತ್ರರಂಗ ಮದರಾಸಿನಿಂದ ಹೈದರಾಬಾದ್‌ಗೆ ತ್ವರಿತವಾಗಿ ತನ್ನ ವಿಳಾಸ ಬದಲಿಸಿಕೊಂಡಿತು. ತೆಲುಗಿನಂತೆಯೇ ಕನ್ನಡ ಚಿತ್ರರಂಗ ಕೂಡ ನಿಧಾನವಾಗಿಯಾದರೂ ಬೆಂಗಳೂರಿಗೆ ಬಂತು. ಆದರೆ ಸ್ವಾವಲಂಬನೆ ಸಾಧಿಸಿತೇ?

ಇತ್ತೀಚೆಗಷ್ಟೇ ಸಿನಿಮಾದ ಸಂಕಷ್ಟಗಳ ಬಗ್ಗೆ ಮಾತನಾಡುತ್ತಿದ್ದ ಹಿರಿಯ ನಿರ್ದೇಶಕ ಎಸ್.ವಿ. ರಾಜೇಂದ್ರಸಿಂಗ್ ಬಾಬು ಬೆಂಗಳೂರಿನಲ್ಲಿ ಸಿನಿಮಾ ತೆಗೆಯೋದು ಅಂದ್ರೆ ನರಕ ಎಂದರು. ಅವರ ಮಾತಿನಲ್ಲಿ ಇಲ್ಲಿನ ಟ್ರಾಫಿಕ್ ಅವ್ಯವಸ್ಥೆ ಹಾಗೂ ಸ್ಟುಡಿಯೋಗಳ ಅಭಾವದ ಬಗ್ಗೆ ವಿಷಾದವಿತ್ತು. ಸಿಂಗ್ ಬಾಬು ಅವರ ಅಳಲು ಸುಳ್ಳೇನಲ್ಲ. ಕನ್ನಡದ ಅನೇಕ ನಿರ್ಮಾಪಕ, ನಿರ್ದೇಶಕರು ಈ ಅಳಲಿಗೆ ದನಿಗೂಡಿಸುತ್ತಾರೆ. ಆದರೆ, ಈ ಸ್ಥಿತಿಗೆ ಕಾರಣಕರ್ತರು ಅವರೇ ಅಲ್ಲವೇ?

ನಮ್ಮ ಜನಪ್ರಿಯ ನಾಯಕರು ನಟನೆಯ ಹೊರತಾಗಿ ಚಿತ್ರೋದ್ಯಮದ ಬೆಳವಣಿಗೆಯ ಬಗ್ಗೆ ಚಿಂತಿಸಲಿಲ್ಲ. ನಿರ್ಮಾಪಕರು ಕೂಡ ತಮ್ಮ ಹಿತಾಸಕ್ತಿಯ ಹೊರತಾಗಿ ಹೆಚ್ಚು ತಲೆಕೆಡಿಸಿಕೊಳ್ಳಲಿಲ್ಲ. ಎಲ್ಲರದೂ ಅವರವರದೇ ಆದ ಅಹಮ್ಮಿನ ಕೋಟೆ! ಒಬ್ಬ ನಾಗೇಂದ್ರರಾವ್, ಒಬ್ಬ ರಾಜಕುಮಾರ್, ಒಬ್ಬ ಪುಟ್ಟಣ್ಣ– ಇಂಥವರ ಕಾರಣದಿಂದಾಗಿ ಉದ್ಯಮ ಈವರೆಗೆ ಉಳಿದುಬಂತೇ ಹೊರತು ತನ್ನ ಬೇರುಗಳನ್ನು ಗಟ್ಟಿಗೊಳಿಸಿಕೊಳ್ಳಲಿಲ್ಲ. ಯಾವುದೇ ಭಾಷೆಯಲ್ಲಿ ಇಲ್ಲದಷ್ಟು ಸವಲತ್ತುಗಳು ಸರ್ಕಾರದಿಂದ ದೊರೆತರೂ ಕನ್ನಡ ಚಿತ್ರೋದ್ಯಮ ಸಶಕ್ತವಾಗಲಿಲ್ಲ.

ಬೆಂಗಳೂರಿನ ವಿಷಯವನ್ನೇ ನೋಡಿ. ಈ ರಾಜಧಾನಿ ನಗರಕ್ಕೆ ಚಿತ್ರೋದ್ಯಮದ ಕೊಡುಗೆಯಾದರೂ ಏನು? ಸಂಸ್ಕೃತಿ, ಜಾತಿಗಳ ಹಂಗಿಲ್ಲದೆ ಗ್ರಾಮ ಪಟ್ಟಣಗಳಿಂದ ಬಂದಿರುವ ಬರುತ್ತಿರುವ ಲಕ್ಷಾಂತರ ಮಂದಿಯ ಪಾಲಿಗೆ ಬೆಂಗಳೂರು ಅಮ್ಮನಿದ್ದಂತೆ. ಆದರೆ, ನಮ್ಮ ಸಿನಿಮಾಗಳ ಪ್ರಕಾರ ಬೆಂಗಳೂರು ರೌಡಿಗಳ ಕೊಂಪೆ. ಅನ್ನ ಹುಡುಕಿಕೊಂಡು ಇಲ್ಲಿಗೆ ಬಂದವರು ಮಚ್ಚು ಹಿಡಿಯುತ್ತಾರೆ! ಗರತಿಯರಿಗಿಂತ ಇಲ್ಲಿ ಪತಿತೆಯರೇ ಹೆಚ್ಚು. ಹೀಗೆ ಬೆಂಗಳೂರಿನ ವರ್ಚಸ್ಸನ್ನು ಹರಾಜು ಹಾಕಿದವರೇ ಬೆಂಗಳೂರು ನರಕ ಎನ್ನುವುದು ವಿಚಿತ್ರವಾಗಿದೆಯಲ್ಲವೇ? ಹೊಸ ಚಿಂತನೆಯ ಸಿನಿಮಾಗಳನ್ನು ಮಾಡುವ ಬದಲು ಚರ್ವಿತ ಚರ್ವಣವನ್ನೇ ಹೊಡೆಯುವವರಿಗೆ ಬೆಂಗಳೂರಾದರೂ ಅಷ್ಟೇ, ಹಾಲಿವುಡ್ ಆದರೂ ಅಷ್ಟೇ...

ಬದಲಾಗಬೇಕಿರುವುದು ಬೆಂಗಳೂರಲ್ಲ, ನಮ್ಮ ಚಿತ್ರಕರ್ಮಿಗಳ ಮನಸ್ಸು.

**-ಮಹತಿ**

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd.,Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@deccanherald.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68